# ಪಾಠ–13, ಸೇವೆ

## (ಅ.ಕೃ, 1 ಮತ್ತು 18, 1 ಕೊರಿಂಥ 1)

**ಮೂಲ: ಬ್ರೂಸ್ ಎನ್. ಕ್ಯಾಮರಾನ್, ಜೆ.ಡಿ., ಅನುವಾದ: ಪಾಸ್ಟರ್ ಚೆಲುವರಾಜು**

**ಪೀಠಿಕೆ:**

ಯೇಸುಸ್ವಾಮಿಯ ವಿಷಯದಲ್ಲಿ ತೋರಿದವರು ಯಾರಾದರೂ ನಿಮಗೆ ಗೊತ್ತೇ? ನಿಮ್ಮ ಜೀವನದಲ್ಲಿ ನೀವು ಯಾವಾಗಲಾದರೂ ಇಂಥಹ ಉತ್ಸಾಹ ಅನುಭವಿಸಿದ್ದುಂಟೇ? ಯೇಸುಸ್ವಾಮಿಯವರ ಸಲುವಾಗಿ ಇಡೀ ತಮ್ಮ ಜೀವಮಾನವನ್ನೆಲ್ಲಾ ಉತ್ಸಾಹದಲ್ಲಿ ಕಳೆದವರು ಯಾರಾದರೂ ನಿಮಗೆ ಗೊತ್ತಿದ್ದಾರೆಯೇ? ನನಗೆ ಕೆಲವರು ಗೊತ್ತು. ಅವರು ತಮ್ಮ ಜೀವನದ ಆರಂಭದಲ್ಲಿ ಯೇಸುಸ್ವಮಿಯ ಸಲುವಾಗಿ ಉತ್ಸಾಹ ತೋರಿದ್ದು ನಿಜ, ಆದರೆ ಜೀವನದ ಗಾಲಿಯುರುಳುತ್ತಿದ್ದಂತೆ, ನಿರುತ್ಸಾಹಕ್ಕೆ ಒಳಗಾದವರುಂಟು ಹೀಗೇಕೆ? ನಮ್ಮ ಕ್ರೈಸ್ತೀಯ ಜೀವನದಲ್ಲಿ ಇದು ಸರ್ವಸಾಮಾನ್ಯ ಎನ್ನುತ್ತೀರಾ? ದೇವರ ಚಿತ್ತಕ್ಕೆ ಇದು ಹೊಂದಿಕೊಳ್ಳುತ್ತಿದೆಯೇ? ಯೇಸುಸ್ವಾಮಿ ನಮ್ಮನ್ನು ಸೇವೆಗೆ ಕರೆದಾಗ, ಅವರು ನಮ್ಮಿಂದ ನಿರೀಕ್ಷಿಸುವುದಾದರೂ ಏನು? ಸತ್ಯವೇದದ ಆಳವಾದ ಅಧ್ಯಾಯನದಿಂದ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳೋಣ.

**I. ಸೇವೆಯ ಪಾಲುಗಾರರು:**

ಅ) ಅ.ಕೃ. 1:1–3 ನ್ನು ಓದಿಕೊಳ್ಳಿ. ಯೇಸುಸ್ವಾಮಿ ತಾವು ಪುನರುತ್ಥಾನಗೊಂಡ ನಂತರ ಮಾಡಿದ್ದೇನು? (ಮರಣದಿಂದ ಜೀವಂತವಾಗಿ ಎದ್ದು ಬಂದವರು ತಾವೇ? ಎಂಬುದನ್ನು ಅವರಿಗೆ ಒಡಂಬಡಿಸುತ್ತಾ 40 ದಿನಗಳನ್ನು ಅವರೊಂದಿಗೆ ಕಳೆದರು. ದೇವರ ರಾಜ್ಯವನ್ನು ಕುರಿತು ಅವರಿಗೆ ಬೋಧಿಸಿದರು).

ಆ) ಅ.ಕೃ. 1:4–6 ನ್ನು ಓದಿಕೊಳ್ಳಿರಿ. ಭವಿಷ್ಯದಲ್ಲಿ ಶಿಷ್ಯರೊಂದಿಗೆ ಯಾರು ಕೆಲಸ ಮಾಡುವದಕ್ಕಿದ್ದರು. (ಪವಿತ್ರಾತ್ಮ ದೇವರು).

1. ಅ.ಕೃ. 1:6 ರಲ್ಲಿ ಶಿಷ್ಯರು ಯೇಸುಸ್ವಾಮಿಯನ್ನು ಕುರಿತು ಕೇಳಿದ ಪ್ರಶ್ನೆಯ ವಿಷಯದಲ್ಲಿ ನಿಮ್ಮ ಆಲೋಚನೆ ಏನು?

i) ಈ ಪ್ರಶ್ನೆಯನ್ನು ಅವರು ಕೇಳಿದ್ದು ಯಾವಾಗ?

(ಅ.ಕೃ. 1:3 ರಲ್ಲಿ ಯೇಸುಸ್ವಾಮಿ ಶಿಷ್ಯರೊಂದಿಗೆ ನಲ್ವತ್ತು ದಿನಗಳ ಕಾಲ ದೇವರ ರಾಜ್ಯದ ವಿಷಯವನ್ನು ಕುರಿತು ಮಾತನಾಡಿದರು ಎಂದು ನೋಡಿದೆವು. ಶಿಷ್ಯರು ತಮ್ಮ ಪ್ರಶ್ನೆಯನ್ನು 40 ದಿನಗಳ ಆದಿಯಲ್ಲಿ ಕೇಳಿದ್ದರೆ ವಿನಹ ಅಂತ್ಯದಲ್ಲಿ ಅಲ್ಲ ಎಂದು ನನಗನ್ನಿಸುತ್ತದೆ).

ಇ) ಅ.ಕೃ. 1:7–8 ನ್ನು ಓದಿಕೊಳ್ಳಿರಿ. ಈ ಹಿನ್ನೆಲೆಯಲ್ಲಿ, ಶಿಷ್ಯರು ಮುಂದೆ ಜನಗಳಿಗೆ ಕೊಡಬೇಕಾದ ಸಾಕ್ಷಿ ಏನು? (ಯೇಸುಸ್ವಾಮಿಯವರ ಪುನರುತ್ಥಾನ ಮತ್ತು ಅವರು ತರಲಿರುವ ದೇವರ ರಾಜ್ಯ ಕುರಿತ ಸಾಕ್ಷಿ).

1) ಇಂದು ನಮ್ಮ ಸೇವೆಯೂ ಇದೇ ಆಗಿದೆಯೇ? ಅಂದು ಶಿಷ್ಯರನ್ನು ಕುರಿತು ಮಾತನಾಡಿದ ಮಾತುಗಳು, ಇಂದಿಗೂ ನಮಗೆ ಅನ್ವಯವಾಗುತ್ತವೆಯೇ?

2) ಅವರು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಲು ಶಕ್ತರಾಗಿದ್ದರೇ? (ಇಲ್ಲ, ಪವಿತ್ರಾತ್ಮನಿಂದ ದೀಕ್ಷಾಸ್ನಾನವಾಗುವತನಕ ಕಾಯುವ ಆದೇಶ ನೀಡಲಾಗಿತ್ತು).

i) ಇಂದಿಗೂ ಅದು ಅನ್ವಯವಾಗುತ್ತದೆಯೇ? ಪವಿತ್ರಾತ್ಮ ದೇವರ ಸಹಾಯ ಬರುವತನಕ, ಸೇವೆ ಮಾಡದೇ ಕಾದಿರೋಣವೇ?

ಈ) ಅ.ಕೃ. 1:12–14 ನ್ನು ಓದಿಕೊಳ್ಳಿ. ಸೇವೆಗೆ ಅವರು ತಮ್ಮನ್ನು ಹೇಗೆ ಸಿದ್ಧಮಾಡಿಕೊಂಡರು? (ಏಕಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು. ಇಂದಿಗೂ ಸೇವೆಯ ಪರಿ ಅಂದಿನಂತೆಯೇ ಇದೆ. ಇಂದಿಗೂ ಅಂದಿನಂತೆಯೇ ಸೇವೆಗೆ ಅದೆಷ್ಟೋ ದಾರಿಗಳಿವೆ. ಆದರೂ ಪವಿತ್ರಾತ್ಮನ ಸಹಾಯವಿಲ್ಲದೇ ನಾವು ಏನನ್ನು ಸಾಧಿಸಲಾರೆವು. ನಮ್ಮ ಸೇವೆಯಲ್ಲಿ ಪವಿತ್ರಾತ್ಮನ ಪಾತ್ರವಿಲ್ಲ ಎಂದು ನಮಗನ್ನಿಸಿದರೆ, ಸತತವಾಗಿ ಪವಿತ್ರಾತ್ಮನ ಸಹಾಯಕ್ಕಾಗಿ ಬೇಡಿ ಅದನ್ನು ನೆರವೇರಿಸಿಕೊಳ್ಳಬೇಕು).

## II. ಸೇವೆ ಮತ್ತು ಆಹಾರ ಸಂಪಾದನೆ:

ಅ) ದೇವರ ಸೇವೆಯಲ್ಲಿದ್ದ ಉತ್ಸಾಹ, ನಾವು ನಮ್ಮ ಆಹಾರವನ್ನು ನಾವೇ ದುಡಿದು ಸಂಪಾದಿಸಿಕೊಳ್ಳಬೇಕು ಎಂದು ಹೇಳಿದಾಗ, ತಣ್ಣಗಾಗಿ ಹೋಗುತ್ತಿದೆಯೇ?

1) ಅಥವಾ ನಮ್ಮ ಅನ್ನದ ಸಂಪಾದನೆ, ಸೇವೆಯ ಒಂದು ಭಾಗವಾಗಿದೆಯೇ?

ಆ) ಅ.ಕೃ. 18:1-4 ನ್ನು ಓದಿಕೋಳ್ಳಿರಿ. ಪೌಲನು ಇಡೀ ದಿನವನ್ನು ದೇವರ ವಾಕ್ಯದ ಬೋಧನೆಯಲ್ಲಿ ಕಳೆಯುತ್ತಿದ್ದನೇ? (ಈ ವಾಕ್ಯಗಳು ಹಾಗೆ ಹೇಳುವುದಿಲ್ಲ. ವಾರದ ದಿನಗಳಲ್ಲಿ ಗುಡಾರ ಮಾಡುವ ಕಸಬು ಮಾಡಿ, ವಾರಾಂತ್ಯದಲ್ಲಿ ಸಬ್ಬತ್ತಿನ ದಿನದಂದು ಆತ ಬೋಧಿಸುತ್ತಿದ್ದನು ಎಂದು ಈ ವಾಕ್ಯಗಳು ಹೇಳುತ್ತವೆ).

ಇ) ಅ.ಕೃ. 18:5 ನ್ನು ಓದಿಕೊಳ್ಳಿರಿ. ಪೌಲನು ಈಗ ಯಾವ ರೀತಿಯಾಗಿ ಸೇವೆ ಮಾಡುತ್ತಿದ್ದಾನೆ? (ವಾರದ ಎಲ್ಲಾ ದಿನಗಳನ್ನು ಬೋಧಿಸುವುದರಲ್ಲಿ ಕಳೆದಿರುವುದು ಈ ವಾಕ್ಯಗಳಲ್ಲಿ ಕಂಡು ಬರುತ್ತದೆ).

ಈ) ವಾರದ ಎಲ್ಲಾ ದಿಗನಳಲ್ಲಿ ಸೇವೆ ಮಾಡುತ್ತಿದ್ದಾಗ ಇದ್ದ ಉತ್ಸಾಹ, ವಾರಾಂತ್ಯದಲ್ಲಿ ಮಾತ್ರ ಸೇವೆ ಮಾಡಿ, ಉಳಿದ ದಿನಗಳಲ್ಲಿ ದುಡಿಯುತ್ತಿದ್ದಾಗ ತಣ್ಣಗಾಗಿ ಹೋಗುತ್ತಿತ್ತೇ? (ನನಗೆ ಹಾಗೆ ಅನ್ನಿಸುವುದಿಲ್ಲ, ಸೇವೆಗೆ ಬೇಕಾದ ಅವಶ್ಯಕತೆಗಳನ್ನೆಲ್ಲಾ ಸಂಪಾದಿಸಿಕೊಳ್ಳುವದು ಆತನ ವಾರವೆಲ್ಲಾ ದುಡಿಯುವುದರ ಭಾಗವಾಗಿತ್ತು).

ಉ) 2 ಥೆಸಲೋನಿಕ 3:6-10 ನ್ನು ಓದಿಕೊಳ್ಳಿರಿ. ಸಾಮಾಜಿಕ ಕೆಲಸವು ಧಾರ್ಮಿಕ ಕರ್ತವ್ಯವೇ? (ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನ ಮಾಡಿಕೊಂಡೆವು ಎಂದು ಪೌಲನು ಹೇಳಿದ್ದಾನೆ. ದೇವರ ಸೇವೆಯಲ್ಲಿ ತನ್ನನ್ನು ದಿನವಿಡೀ ತೊಡಗಿಸಿಕೊಂಡು, ಭಕ್ತರಿಂದ ಕಾಣಿಕೆ ಪಡೆದು ಆತ ಜೀವಿಸಬಹುದಾಗಿತ್ತು. ಆದರೆ ಆತ ಹಾಗೆ ಮಾಡದೇ ಕ್ರೈಸ್ತಸಮುದಾಯಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟನು. ಹೀಗಾಗಿ ಸೇವೆಯ ಹೆಸರಿನಲ್ಲಿ ಯಾರೂ ಸೋಮಾರಿಗಳಾಗಲು ಅವಕಾಶವಿರಲಿಲ್ಲ).

1) ಈ ವಿಷಯವನ್ನು ಪ್ರಾಯೋಗಿಕವಾಗಿ ಪರಿಶೀಲಿಸಿನೋಡೋಣ. ನಿಮ್ಮೊಂದಿಗೆ ವಾರಾವೆಲ್ಲಾ ದುಡಿದು, ವಾರಾಂತ್ಯದಲ್ಲಿ ಆಲಯಕ್ಕೆ ಬಾರದಿರುವವರು ಯಾರಾದರು ನಿಮಗೆ ಗೊತ್ತಿದ್ದಾರೆಯೇ?

2) ನಿಮ್ಮ ನೆರೆಹೊರೆಯವರು ಅಥವಾ ಪರಿಚಿತರು ಆಲಯಕ್ಕೆ ಬಾರದಿರುವುದನ್ನು ನೀವು ಗಮನಿಸಿದ್ದಿರಿಯೇ? (ಈ ಪ್ರಶ್ನೆಗಳಿಗೆ ನೀವು "ಹೌದು" ಎಂದು ಉತ್ತರಿಸುವುದಾದರೆ, ಈ ಜನರನ್ನು ಆಕರ್ಷಿಸಲು ನೀವು ಒಂದು ಮಾದರಿ ಜೀವನ ಜೀವಿಸಬೇಕು. ಆತ್ಮನಿಂದ ಭರಿತವಾದ ಮಾತುಗಳು ನಿಮ್ಮದಾಗಿರಬೇಕು. ಯೋಹಾನ 14:26 ನ್ನು ಓದಿಕೊಳ್ಳಿ).

ಊ) ತೀತ 2:7-8 ನ್ನು ಓದಿಕೊಳ್ಳಿರಿ. ನಮ್ಮ ಜೀವನದ ಯಾವ ಭಾಗ ಸೇವೆಗೆ ಸಹಾಯಕಾರಿಯಾಗಿದೆ? (ನಾವು ಮಾಡುವ ಯಾವ ಕೆಲಸವೇ ಆಗಲಿ ಒಳ್ಳೆಯದಕ್ಕೆ

ಅಥವಾ ಕೆಟ್ಟದಕ್ಕೆ ಪ್ರಭಾವ ಬೀರುತ್ತಿರುತ್ತದೆ. ನಮ್ಮ ಸ್ವಭಾವ ಎಂತಹ ಪ್ರಭಾವ ಬೀರುತ್ತಿದೆ ಎಂಬುದರ ಮೇಲೆ, ನಮ್ಮ ಸೇವೆ ಹೇಗಿರುತ್ತದೆ ಎಂಬುದು ಅವಲಂಬಿತವಾಗಿದೆ. ಪವಿತ್ರಾತ್ಮದೇವರ ಸಹಾಯದಿಂದ ಎಲ್ಲಾ ರೀತಿಯಲ್ಲೂ ಧನಾತ್ಮಕ ಪ್ರಭಾವಗಳನ್ನು ಬೀರಲು ಪ್ರಯತ್ನಿಸಿ).

**III. ಸೇವೆಯ ಸಂದೇಶ:**

ಅ) 1 ಕೋರಿಂಥ 1:18 ನ್ನು ಓದಿಕೊಳ್ಳಿರಿ. ನಮ್ಮ ಸಂದೇಶ ಏನಾಗಿರಬೇಕೆಂದು ಸತ್ಯವೇದ ಹೇಳಿದೆ? (ಶಿಲುಬೆ).

1) ನಮ್ಮ ಸಂದೇಶದಲ್ಲಿರುವ ಸಮಸ್ಯೆ ಏನು? (ಏನೂ ಸಮಸ್ಯೆಯಿಲ್ಲ, ಆದರೆ ಪ್ರಪಂಚದಲ್ಲಿ ಕೆಲವರು ನಮ್ಮ ಸಂದೇಶವನ್ನು ಹುಚ್ಚು ಮಾತು ಎಂದು ಪರಿಗಣಿಸುತ್ತಾರೆ.

2) ಈ ಮೊದಲು ಕ್ರಿಸ್ತನ ಶಿಷ್ಯರಾದ ನಾವು, ಆತನ ಪುನರುತ್ಥಾನ ಹಾಗೂ ದೇವರ ರಾಜ್ಯವನ್ನು ಕುರಿತು ಸಾಕ್ಷಿಕೊಡಬೇಕು ಎಂದು ತೀರ್ಮಾನಿಸಿದೆವು. ನಮ್ಮ ಸಂದೇಶ ಶಿಲುಬೆಯನ್ನು ಕುರಿತದ್ದಾಗಿದ್ದರೆ, ಅದು ನಾವು ಕೊಡಬೇಕಾಗಿರುವ ಸಾಕ್ಷಿಗೆ ಸಮಾನವಾಗಿದೆಯೇ? (ಹೌದು, ಶಿಲುಬೆ ಮತ್ತು ಯೇಸುಸ್ವಾಮಿಯ ಪುನರುತ್ಥಾನ, ಪಾಪದ ಪರಿಹಾರ ಮತ್ತು ನಿತ್ಯಜೀವನಕ್ಕೆ ಸದಾವಕಾಶ ಮಾಡಿಕೊಡುತ್ತವೆ).

ಆ) 1 ಕೋರಿಂಥ 1:19-21 ನ್ನು ಓದಿಕೊಳ್ಳೋಣ: "ಮೂರ್ಖತನ"ವನ್ನು ಕುರಿತು ಪ್ರಸಂಗಮಾಡುವುದರಲ್ಲಿ ಸುವಾರ್ತೆಯಿದೆಯೇ? (ಸಂದೇಶ ಸಾರುವುದಕ್ಕೆ ನೀವೇನೂ ಪಂಡಿತರೇ ಆಗಿರಬೇಕಾಗಿಲ್ಲ).

ಇ) 1 ಕೋರಿಂಥ 1:22-25 ನ್ನು ಓದಿಕೊಳ್ಳಿರಿ. ಸಂದೇಶ ಸಾರಲು ಅದ್ಭುತ ಕಾರ್ಯಗಳನ್ನು ಸಾಧಿಸಬೇಕೇ? ಅಥವಾ ತರ್ಕವಾದಿಯಾಗಿರಬೇಕೆ?
(ನಿಮಗೆಲ್ಲಾ ಗೊತ್ತಿರುವ ಹಾಗೆ, ನಾನು ತರ್ಕವನ್ನು ಬಳಸುತ್ತಿದ್ದೇನೆ ಏಕೆಂದರೆ ಅದು ಸುವಾರ್ತೆಯನ್ನು ಪ್ರವರ್ಧಮಾನಕ್ಕೆ ತರುತ್ತಿದೆ. ಆದರೆ ನಾವು ಶಿಲುಬೆಗೆ ಜಡಿಯಲ್ಪಟ್ಟ ಕ್ರಿಸ್ತನ ಸಂದೇಶ ಸಾರಲು ಅದ್ಭುತ ಕಾರ್ಯಗಳನ್ನೇ ಆಗಲಿ ಅಥವಾ ತರ್ಕವನ್ನೇ ಆಗಲಿ ಮಾಡಬೇಕಾಗಿಲ್ಲ.

1) ನಮ್ಮ ಸಂದೇಶ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನೇ ಕುರಿತದ್ದಾಗಿರಬೇಕೇಕೆ? ಸತ್ಕಾರ್ಯಗಳು ಸಾಲದೇ? ಸಬ್ಬತ್ತಿನ ಸತ್ಯ ಸಾರಿದರೆ ಸಾಲದೇ? ಪಥ್ಯಾಹಾರ ಊಟಮಾಡುವುದನ್ನು ಕುರಿತು ಸಾರಿದರೆ ಸಾಲದೇ? ವ್ಯಾಯಾಮ, ಹಾನಿಕರ ವಿಷವಸ್ತುಗಳ ಸೇವನೆ ಸಲ್ಲದು, ಇತ್ಯಾದಿಗಳನ್ನು ಕುರಿತು ಸಾರಿದರೆ ಸಾಕಲ್ಲವೇ?

(ಗುಡಾರ ಸೇವೆಯಲ್ಲಿ ಕುರಿ ಬಲಿಯಾಗುತ್ತಿತ್ತು. ಅದು ಮುಂದೆ ಬರಲಿರುವ ಕ್ರಿಸ್ತನ ಸಂಕೇತವಾಗಿತ್ತು. ಶಿಲುಬೆಯಲ್ಲಿ ಅದು ನೆರವೇರಿತು. ಯೋಹಾನ 1:29 ರಲ್ಲಿ "ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" ಎಂದು ಓದಿಕೊಂಡಿದ್ದೇವೆ. ಆದ್ದರಿಂದ ಯೇಸುಸ್ವಾಮಿಯವರ ತ್ಯಾಗಬಲಿಯೇ ನಮ್ಮ ಸಂದೇಶದ ಕೇಂದ್ರ ಬಿಂದುವಾಗಿರಬೇಕು. ನಮಗೆ ಬೋಧಿಸಲು ಅನೇಕ ಆಲೋಚನೆಗಳು, ತರ್ಕಗಳು, ಸತ್ ಸಂಗತಿಗಳು ನಮ್ಮಲ್ಲಿರಬಹುದು, ಆದರೆ ನಮ್ಮ ಸಂದೇಶದ ತಿರುಳು ಮಾತ್ರ ಶಿಲುಬೆಯೇ ಆಗಿರಬೇಕು ಆಮೆನ್).

ಈ) 1 ಕೋರಿಂಥ 1:26-27 ನ್ನು ಓದಿಕೊಳ್ಳಿರಿ. ದೇವರು ತನ್ನ ಆಟದ ತಂಡಕ್ಕೆ ಬಲಹೀನರನ್ನು ಆರಿಸಿಕೊಂಡಿರುವುದೇಕೆ? ಏಕೆಂದರೆ ಪ್ರಪಂಚ ಬಹಳ ಕೆಟ್ಟದ್ದಾಗಿ ಕಾಣಬೇಕು ಎಂಬುದು ಆತನ ಆಲೋಚನೆಯೇ? ಅಂಥಹ ಗುರಿ ಏಕೆ? (ನಮ್ಮ ಸಂದೇಶ ಕ್ರಿಸ್ತನ ಕುರಿತದ್ದಾಗಿರಬೇಕೆ ವಿನಹ ನಮ್ಮನ್ನು ಕುರಿತದ್ದಾಗಿರಬಾರದು. ಈ ತಿರುಳಿನಲ್ಲಿ ಏಕತೆಯಿರುವುದನ್ನು ಕಂಡಿರಾ? ನಮ್ಮ ಗುರಿ, ಶಿಲುಬೆಯನ್ನು ಜನಗಳಿಗೆ ಪರಿಚಯಿಸುವುದಾಗಿರಬೇಕೆ ವಿನಹ, ನಮ್ಮ ಕೆಲಸಗಳನ್ನಲ್ಲ ಹಾಗೇಕೆ ಎನ್ನುವಿರಾ? ಏಕೆಂದರೆ, ಶಿಲುಬೆ ನಮಗಾಗಿ ದೇವರು ಏನು ಮಾಡಿದರು ಎಂಬುದನ್ನು ಹೇಳುತ್ತಿದೆಯೇ ವಿನಹ ನಾವೇನು ಮಾಡಿದೆವು ಎಂಬುದನ್ನು ಹೇಳುವುದಿಲ್ಲ. ಅಧಿಕಾರ, ಹಣ, ಪ್ರಭಾವ, ಬುದ್ಧಿಶಾಲಿತನ, ರೂಪ ಇರುವವರಿಗೆ ಸೇವೆಯಲ್ಲಿ ಯಾವ ಮುಖ್ಯತ್ವವೂ ಇಲ್ಲ. ಅಲ್ಲಿ ಅವರಿಗೆ ಅನುಕೂಲಕ್ಕಿಂತ, ಅನಾನುಕೂಲವೇ ಹೆಚ್ಚು, ಏಕೆಂದರೆ ಅಲ್ಲಿ ಗಣನೆಗೆ ಬರುವುದು ದೇವರೇ ವಿನಹ, ಇವರಲ್ಲಿರುವ ಸ್ವತ್ತು, ಅಧಿಕಾರ, ಹಣ, ರೂಪ ಯಾವುದೂ ಗಣನೆಗೆ ಬಾರದು).

1) 1 ಕೋರಿಂಥ 1:28-31 ನ್ನು ಓದಿಕೊಳ್ಳೋಣ. ಹೀಗೆಂದ ಮಾತ್ರಕ್ಕೆ ಬುದ್ಧಿಶಾಲಿಗಳು, ಪ್ರಭಾವಿ ವ್ಯಕ್ತಿಗಳು ಸೇವೆಗೆ ಅನರ್ಹರು ಎಂದಾಯಿತೇ? (ಮೊದಲನೇಯದಾಗಿ ಈ ವಾಕ್ಯಗಳು ಯಾರಿಂದ ಬರೆಯಲ್ಪಟ್ಟವು ಎಂಬುದನ್ನು ನೋಡಿ, ಬಹಳ ಕಲಿತವನೂ ಹಾಗೂ ಅತ್ಯಾಧಿಕ ಅನುಭವಶಾಲಿಯೂ ಆದ ಪೌಲನಿಂದಲ್ಲವೇ ಈ ಮಾತುಗಳು ಬರೆಯಲ್ಪಟ್ಟಿರುವದು. ಹೀಗಾಗಿ ಯಾರ್ಯಾರು ದೇವರನ್ನು ಮಹಿಮೆಪಡಿಸುತ್ತಾರೋ ಮತ್ತು ತಮ್ಮ ಸೇವೆಯಲ್ಲಿ ದೇವರನ್ನೇ ಗುರಿಯಾಗಿಟ್ಟುಕೊಂಡಿರುತ್ತಾರೋ ಅವರೆಲ್ಲಾ ದೇವರ ಸೇವೆಗೆ ಅರ್ಹರೆಂಬುದೇ ಪೌಲನ ಮಾತಿನ ಸಾರವಾಗಿದೆ. ದೇವರು ತನ್ನ ಕೆಲಸವನ್ನು ಸಾಧಿಸಲು ಮಾನವನ ಮಹಿಮೆಯನ್ನೇನೂ ಉಪಯೋಗಿಸಿಕೊಳ್ಳುವುದಿಲ್ಲ. ದೇವರಿಗೆ ಎಲ್ಲಾ ಘನಮಾನ ಸಲ್ಲಬೇಕೆಂದು ಮನಪೂರ್ವಕವಾಗಿ ನುಡಿಯುವ ಪಾಲುಗಾರನ ಅವಶ್ಯಕತೆಯಿದೆ).

ಉ) ಯಾರು ಪ್ರಸಂಗಮಾಡಲು ಅರ್ಹರು ಎಂದು ನನ್ನನ್ನು ಕೇಳಿದರೆ, ನಾನು ದೇವರ ಆರಾಧನೆಯ ಸಮಯ, ''ತರಬೇತಿಗೆ ಸಮಯವಲ್ಲ'' ಎಂದು ಹೇಳುತ್ತಿದ್ದೆ. ಅದರ ಅರ್ಥ: ಪ್ರಸಂಗ ಮಾಡಲು ಸಿದ್ಧರಾಗಿಲ್ಲದವರು, ಸರಿಯಾದ ಸಿದ್ಧತೆ ಮಾಡಿಕೊಳ್ಳದವರು. ಅನಾನುಭವಿಗಳನ್ನು ವೇದಿಕೆಗೆ ಹತ್ತಿಸಬಾರದು ಎಂಬುದು ನನ್ನ ಆಲೋಚನೆ. ಸಬ್ಬತ್ತಿನ ಸಮಯ, ದೇವರ ಮಕ್ಕಳಿಗೆ ಬಹಳ ಗಂಭೀರವಾದದ್ದು, ಬಹಳ ಕಡಿಮೆ ಸಮಯದಲ್ಲಿ ಹೆಚ್ಚು ಕಲಿಯಬೇಕಾಗಿರುತ್ತದೆ. ಹೀಗಾಗಿ ಅದು ಬಹಳ ಬೆಲೆಯುಳ್ಳ ಸಮಯ ಅಂತಹ ಸಮಯವನ್ನು ಉರುಳಿಲ್ಲದ ಪ್ರಸಂಗಗಳಿಂದ ಹಾಳುಮಾಡಿಕೊಳ್ಳಬಾರದು. 1 ಕೋರಿಂಥ 2:1–5 ವಾಕ್ಯಗಳನ್ನು ಓದಿಕೊಳ್ಳಿರಿ. ನಾನು ಹೇಳಿದ್ದರಲ್ಲಿ ತಪ್ಪೇನಾದರೂ ಇದೆಯೆ?

ಊ) ಸ್ನೇಹಿತರೇ, ಸೇವಾಮನೋಭಾವ ನಿಮ್ಮಲ್ಲಿದೆಯೇ? ಹಾಗಾದರೆ ಪವಿತ್ರಾತ್ಮ ದೇವರ ಪಾಲುಗಾರನಾಗಿ ದೇವರ ಕುರಿಮರಿಯ ಕುರಿತ ಸುವಾರ್ತೆಯನ್ನು ಮತ್ತು ದೇವರ ರಾಜ್ಯವನ್ನು ಕುರಿತ ಭವಿಷ್ಯವಾಣಿಯನ್ನು ಜನಸಮೂಹಕ್ಕೆ ಸಾರಿರಿ.

IV. **ಮುಂದಿನ ವಾರ:** ಯೋಹಾನನ ಪತ್ರಿಕೆಯಾಧಾರಿತ ಹೊಸ ಪಾಠಗಳ ಆರಂಭ. **ನಾನಿನ್ನೂ ಕಾದಿರಲಾರೆ!.**